# ನಮ್ಮಲ್ಲಿ ಕಾನೂನಿದೆ ನಿರ್ವಹಣೆ ಇಲ್ಲ ಅಷ್ಟೇ



**ಸಂದರ್ಶನ**

**ನಾ. ವಿಜಯಶಂಕರ**
। ಭಾರತೀಯ ಸೈಬರ್ ಕಾನೂನು ತಜ್ಞ

**● ಐಟಿ ಕ್ಷೇತ್ರದಲ್ಲಿ ಭಾರತ ಎಷ್ಟೇ ಬಲಾಢ್ಯವಾಗಿದ್ದರೂ ಸೈಬರ್ ದಾಳಿಗೆ ಸುಲಭವಾಗಿ ಈಡಾಗುತ್ತಿದೆಯಲ್ಲ?**

ಸೈಬರ್ ದಾಳಿಗಳಿಗೆ ಮುಖ್ಯವಾಗಿ ಎರಡು ಅಂಶಗಳು ಕಾರಣವಾಗುತ್ತದೆ. ಮೊದಲು ದಾಳಿಗೆ ಬೇಕಿರುವ ಉತ್ತೇಜಿತ ವ್ಯಕ್ತಿಗಳು.ಇಂತಹ ವ್ಯಕ್ತಿಗಳು ಪಾಕಿಸ್ತಾನದಲ್ಲಿ ಬಹಳಷ್ಟು ಜನ ಇದ್ದಾರೆ ಎಂದು ಎಲ್ಲರಿಗೂ ತಿಳಿದಿರುವ ಸತ್ಯ. ಚೀನಾದಲ್ಲಿ ಸೈಬರ್ ಸೈನಿಕ ವ್ಯವಸ್ಥೆಯನ್ನು ಸರ್ಕಾರವೇ ನಡೆಸುತ್ತಿದೆ.ಆದ್ದರಿಂದ ಭಾರತಕ್ಕೆ ಪಾಕಿಸ್ತಾನ ಮತ್ತು ಚೀನಾ ಎರಡೂ ದೇಶದಿಂದ ಸೈಬರ್ ದಾಳಿಯ ಭಯ ಇದೆ. ಎರಡನೆಯದಾಗಿ ಸೈಬರ್ ದಾಳಿಗೆ ಬೇಕಿರುವುದು ಸೈಬರ್ ಉಪಕರಣಗಳು. ಸೈಬರ್ ದಾಳಿಯ ಮೂಲ ನಾವು ಉಪಯೋಗಿಸುವ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್. ಭಾರತ ಇಂದು ಗಣಕ ತಂತ್ರಾಂಶದಲ್ಲಿ ಮಾತ್ರ ಪರಿಣಿತಿಯನ್ನು ಪಡೆದಿದೆ.ಗಣಕ ವ್ಯವಸ್ಥೆಗಳಲ್ಲಿ ಭಾರತ ಚೀನಾವನ್ನು ಅವಲಂಬಿಸಿದೆ.ಇಂದು ಭಾರತದಲ್ಲಿರುವ ಹೆಚ್ಚಿನ ಕಂಪ್ಯೂಟರ್‌ಗಳು, ಲ್ಯಾಪ್‌ಟಾಪ್, ಮೋಡೆಮ್, ಮೊಬೈಲ್ ಕಂಪನಿಗಳು ಉಪಯೋಗಿಸುವ ಉಪಕರಣಗಳು ಚೀನಾದಲ್ಲಿ ತಯಾರಾಗಿವೆ. ಈ ಎರಡೂ ಕಾರಣಗಳಿಂದ ಭಾರತ ಸೈಬರ್ ದಾಳಿಗೆ ಸುಲಭ ತುತ್ತಾಗಿದೆ. ಇದನ್ನು ತಡೆಯಲು ಕಳೆದ ವರ್ಷ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ನೇತೃತ್ವದಲ್ಲಿ ಭಾರತ ಸರ್ಕಾರ ಒಂದು ಸೈಬರ್ ರಕ್ಷಣಾ ಸಮಿತಿ ರಚಿಸಿತ್ತು. ಆದರೆ ಹೆಚ್ಚು ದಿನ ಆ ವ್ಯವಸ್ಥೆ ಉಳಿಯಲಿಲ್ಲ. ಇದಕ್ಕೆ ಕಾರಣ ರಾಜಕೀಯ ಹಾಗೂ ಅಧಿಕಾರಿಗಳ ಬೇಜವಾಬ್ದಾರಿತನ, ಭ್ರಷ್ಟಾಚಾರ.

**● ಸರ್ಕಾರಿ ವೆಬ್‌ಸೈಟ್‌ಗಳ ಹ್ಯಾಕಿಂಗ್ ಬಲು ಸುಲಭ ಎನ್ನುವ ಮಾತಿದೆ. ಇದಕ್ಕೇನು ಕಾರಣ?**

ಸರ್ಕಾರಿ ವೆಬ್‌ಸೈಟ್‌ಗಳ ನಿರ್ವಹಣೆ ತಾಂತ್ರಿಕವಾಗಿ ನ್ಯಾಶನಲ್ ಇನ್ಫರ್ಮಾಟಿಕ್ ಸೆಂಟರ್‌ಗೆ (ಎನ್‌ಐಸಿ) ಸೇರಿದೆ.ಆದರೆ ಇತರೆ ಇಲಾಖೆ ಅಧಿಕಾರಿಗಳು ತಾಂತ್ರಿಕವಾಗಿ ಸೈಬರ್ ಸೆಕ್ಯುರಿಟಿ ಬಗ್ಗೆ ಪರಿಣಿತರಾಗಿರುವುದಿಲ್ಲ. ಎನ್‌ಐಸಿ ಅಧಿಕಾರಿಗಳಿಗೆ ಬಹುಶಃ ಈ ವೆಬ್‌ಸೈಟ್‌ಗಳು ತಮ್ಮ ಜವಾಬ್ದಾರಿಯಲ್ಲ ಎಂಬ ಭಾವನೆ ಇರಬಹುದು.ಜೊತೆಗೆ ಸೆಕ್ಯುರಿಟಿಗೆ ಹಣಕಾಸಿನ ಕೊರತೆ ಬರಬಹುದು.

**● ನಮ್ಮಲ್ಲಿರುವ ಸೈಬರ್ ಕಾನೂನುಗಳು ಪ್ರಬುದ್ಧವಾಗಿವೆಯೇ?**

ಇಂದು ಭಾರತದಲ್ಲಿ ಸೈಬರ್ ಅಪರಾಧಗಳಿಗೆ ಕಾನೂನು ಇಲ್ಲದಿರುವುದು ಕಾರಣವಲ್ಲ. ಆದರೆ ಕಾನೂನಿನ ನಿರ್ವಹಣೆಯ ಕೊರತೆ ಇದೆ ಎಂಬುದು ನಿರ್ವಿವಾದ.ಕಾನೂನು ನಿರ್ವಾಹಕರಲ್ಲಿ ಬಹುತೇಕ ಮಂದಿಗೆ ಸೈಬರ್ ಕಾನೂನಿನ ಅರಿವಿಲ್ಲ ಹಾಗೂ ಭಾರತ ಸರಕಾರ ಕಾನೂನನ್ನು ಉಪಯೋಗಕ್ಕಿಂತ ಹೆಚ್ಚಾಗಿ ದುರುಪಯೋಗ ಪಡಿಸಿಕೊಳ್ಳಲು ಹೊರಟಿದೆ. ಒಬ್ಬ ವ್ಯಕ್ತಿ ಕಾನೂನಿನ ಉಲ್ಲಂಘನೆಯನ್ನು ಮಾಡಿದ್ದಲ್ಲಿ, ಅವನು ಭಾರತದಿಂದ ಹೊರಗಿದ್ದರೂ ಅಥವಾ ಬೇರೆ ದೇಶದ ಪ್ರಜೆಯಾಗಿದ್ದರೂ ಶಿಕ್ಷಾರ್ಹನಾಗುತ್ತಾನೆ. ಆದರೆ ಇದಕ್ಕೆ ಅಂತರರಾಷ್ಟ್ರೀಯ ಒಪ್ಪಂದ ಅಗತ್ಯ ಇದೆ. ಭಾರತದಲ್ಲಿ ಇತ್ತೀಚೆಗೆ ನಡೆದ ಸೈಬರ್ ದಾಳಿ ಪಾಕಿಸ್ತಾನಿಗಳಿಂದ ಉತ್ತೇಜಿತವಾಗಿದ್ದು ಸೈಬರ್ ಯುದ್ಧ ಅಥವಾ ಸೈಬರ್ ಭಯೋತ್ಪಾದನೆ ಎಂದು ಎಲ್ಲರಿಗೂ ತಿಳಿದ ವಿಷಯ.ಆದರೆ ನಮ್ಮ ಸರಕಾರಗಳು ಈ ಘಟನೆಗಳಿಗೆ ಹೇಗೆ ಸ್ಪಂದಿಸಬೇಕೆಂದನ್ನು ಇನ್ನೂ ಯೋಚಿಸುತ್ತಿವೆ. ಇದು ಪಾಕಿಸ್ತಾನಿ ಸರಕಾರದ ಪ್ರಚೋದನೆಯಿಂದ ಆಗಿದ್ದೆಂದು ಪರಿಗಣಿಸಿದರೆ, ಕೇಂದ್ರ ಸರಕಾರ ಈ ವಿಷಯವನ್ನು ವಿಶ್ವಸಂಸ್ಥೆಯಲ್ಲಿ ಅಥವಾ ಇನ್ನಿತರ ಜಾಗತಿಕ ಸಮಾವೇಶಗಳಲ್ಲಿ ಚರ್ಚಿಸಬೇಕಾಗುತ್ತದೆ.ಇದಕ್ಕೆ ಬೇಕಾದ ಸಾಕ್ಷ್ಯಾಧಾರಗಳನ್ನು ಒದಗಿಸಬೇಕಾಗುತ್ತದೆ. ಹಾಗೇ ಇತ್ತೀಚಿನಲ್ಲಿ ಬೆಂಗಳೂರಿನಲ್ಲಿ ನಡೆದ ಘಟನೆಗಳ ವಿರುದ್ಧ ಕ್ರಮ ಕೈಗೊಳ್ಳಲು ಐಟಿ ಕಾಯ್ದೆಯ ಸೆಕ್ಷನ್ 66 (ಎಫ್)ನಡಿ ಅವಕಾಶವಿದ್ದರೂ ಸಹ, ರಾಜ್ಯ ಸರಕಾರ ಈ ಕಾನೂನಿನ ಉಪಯೋಗ ಪಡೆಯುವಲ್ಲಿ ವಿಫಲವಾಗಿದೆ. ಬಹುಶಃ ರಾಜಕೀಯ ಕಾರಣಗಳು ಇಲ್ಲಿ ಕೆಲಸ ಮಾಡಿರಬಹುದು.




**● ಸೈಬರ್ ಸೆಕ್ಯುರಿಟಿ ವಿಚಾರದಲ್ಲಿ ನಮ್ಮ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳೇನು?**

ಸೈಬರ್ ಸೆಕ್ಯುರಿಟಿ ಎಂಬುದು ಒಂದು ಕ್ಲಿಷ್ಟ ಸಮಸ್ಯೆ. ಇದಕ್ಕೆ ಒಂದು ಅಗಾಧವಾದ ವ್ಯವಸ್ಥೆ ಬೇಕು. ಕೇಂದ್ರ ಹಾಗೂ ರಾಜ್ಯ ಮಟ್ಟಗಳಲ್ಲಿ ಮೊದಲು ಸೈಬರ್ ಸೆಕ್ಯುರಿಟಿ ಅಡ್ವೈಸರಿ ಕಮಿಟಿ ಸ್ಥಾಪನೆಯಾಗಬೇಕು. ನಂತರ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಸೈಬರ್ ಸೆಕ್ಯುರಿಟಿ ಪಾಲಿಸಿ ರೂಪಗೊಳ್ಳಬೇಕು. ಈ ದಿಶೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ಕೆಲವು ನೀತಿ ರೂಪಗೊಂಡಿದೆ. ತಮಿಳುನಾಡಿನಲ್ಲಿ ರಾಜ್ಯಮಟ್ಟದ ನೀತಿ ಘೋಷಣೆಯಾಗಿದೆ. ಆದರೆ ಕರ್ನಾಟಕ ಸೇರಿದಂತೆ ಇತರ ರಾಜ್ಯಗಳು ಈ ವಿಷಯದಲ್ಲಿ ಹಿಂದುಳಿದಿವೆ. ಇದರೊಂದಿಗೆ ಭಾರತ ಕಂಪ್ಯೂಟರ್ ಹಾರ್ಡ್‌ವೇರ್ ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸಬೇಕು. ಸಾಫ್ಟ್‌ವೇರ್‌ನಲ್ಲಿನಲ್ಲಿ ನಮ್ಮದೇಆದ ಆಪರೇಟಿಂಗ್ ಸಿಸ್ಟಮ್ ತಯಾರಿಸಬೇಕು. ನಮ್ಮ ಎಂಜಿನಿಯರಿಂಗ್ ಶಿಕ್ಷಣದಲ್ಲಿ ಸೈಬರ್ ಸೆಕ್ಯುರಿಟಿ ವಿಷಯ ಸೇರ್ಪಡೆಯಾಗಬೇಕು. ಪಿಯುಸಿ ಶಿಕ್ಷಣದಲ್ಲಿ ಸೈಬರ್ ಕಾನೂನು ಅರಿವಿನ ಬಗ್ಗೆ ಪಠ್ಯ ಸೇರಿಸಲು ಕೈಗೊಳ್ಳಬೇಕು. ಸೈಬರ್ ಸೆಕ್ಯುರಿಟಿ ಸಂಶೋಧನಾ ಕೇಂದ್ರಗಳು ರೂಪುಗೊಳ್ಳಬೇಕು. ಜನರಲ್ಲಿ ಸೆಕ್ಯುರಿಟಿ ಬಗ್ಗೆ ಜಾಗೃತಿ ಮೂಡಬೇಕು. ಇದಕ್ಕಾಗಿ ನಮಗೆ ಒಂದು ಸಮಗ್ರ ಸೈಬರ್‌ರಕ್ಷಣಾ ನೀತಿಯ ಅಗತ್ಯದೆ.

**● ಸೈಬರ್ ಅಪರಾಧಗಳನ್ನು ತಡೆಯಲು, ಅಪರಾಧಿಗಳನ್ನು ಪತ್ತೆ ಹಚ್ಚಲು ನಮ್ಮಲ್ಲಿನ ವ್ಯವಸ್ಥೆ ಹೇಗಿದೆ?**

ಸೈಬರ್ ಅಪರಾಧಗಳನ್ನು ತಡೆಯಲು ಅಗತ್ಯ ಕಾನೂನು ವ್ಯವಸ್ಥೆ ಐಟಿ ಕಾಯ್ದೆ ರೂಪದಲ್ಲಿ ಆಗಲೇ ಲಭ್ಯವಿದೆ.ಆದರೆ ಈ ಕಾನೂನನ್ನು ಅನುಷ್ಠಾನಗೊಳಿಸುವುದರಲ್ಲಿ ಅಡಚಣೆ ಇರಬಹುದು. ಮುಖ್ಯವಾಗಿ ಪೋಲೀಸರಲ್ಲಿ ಇನ್ನೂ ಹೆಚ್ಚಿನ ತರಬೇತಿ ಕೊಡುವ ಅವಶ್ಯಕತೆ ಇದೆ. ಹಾಗೇ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಿಗೂ, ಮ್ಯಾಜಿಸ್ಟ್ರೇಟ್‌ಗಳಿಗೂ ಹೆಚ್ಚಿನ ತರಬೇತಿ ಅವಶ್ಯಕತೆ ಇದೆ.

**● ನೆಟ್ಟಿಗರಿಗೆ ತಾವು ಕೊಡುವ ಸಲಹೆ.**

ಯಾವುದೇ ಅಪರಾಧ ನಿಯಂತ್ರಿಸುವಲ್ಲಿ ಜನಗಳ ಎಚ್ಚರ ಬಹು ಮುಖ್ಯ. ಸಾರ್ವಜನಿಕರು ಅಂತರ್ಜಾಲ ಉಪಯೋಗಿಸುವಾಗ ಅದರ'ಅಪಾಯಗಳನ್ನು ಅರಿತುಕೊಂಡು ಮುನ್ನೆಚ್ಚರಿಕೆ ವಹಿಸುವುದು ಅಗತ್ಯ. ಅಂತರ್ಜಾಲದ ಮಾಹಿತಿಯನ್ನು ಕಣ್ಣು ಮುಚ್ಚಿ ನಂಬುವುದು ಅಪಾಯ. ಇ ಮೇಲ್‌ನಲ್ಲಾಗಲಿ ಅಥವಾ ಫೋನ್ ಮೂಲಕವಾಗಲೀ ಯಾರಾದರೂ ಪಾಸ್‌ವರ್ಡ್ ಕೇಳಿದರೆ ನಂಬಬಾರದು. ಹಾಗೇ ನಿಮಗೆ ಲಾಟರಿ ಬಹುಮಾನ ಬಂದಿದೆ ಅಥವಾ ನಿಮ್ಮ ಸ್ನೇಹಿತರು ವಿದೇಶದಲ್ಲಿ ಪರ್ಸ್ ಕಳೆದುಕೊಂಡಿದ್ದರೆ ಅವರಿಗೆ ತಕ್ಷಣ ಹಣ ಕಳಿಸಿ ಅಂತ ಹೇಳಿದರೆ ಅದು ಸುಳ್ಳು ಎಂದು ಗ್ರಹಿಸಬೇಕು. ಇಂಟರ್‌ನೆಟ್ ಬ್ಯಾಂಕಿಂಗ್ ವೇಳೆ ಕಾನೂನು ಬದ್ಧವಾಗಿ ಮಾಹಿತಿ ರಕ್ಷಣಾ ವಿಧಾನವನ್ನು ಅನುಸರಿಸುವಂತೆ ತಾಕೀತು ಮಾಡಬೇಕು.